## ಕಾಡಲಿರುವ 'ಕಾಡು'

ಶಿವರುದ್ರಯ್ಯನವರ ನಿರ್ದೇಶನದ 'ಮಾಗಿಯ ಕಾಲ' ಸಿನಿಮಾದ ನಾಯಕ ನಿಶಾಂತ್ ನೆನಪಿದೆಯಾ? ನೀನಾಸಂನಲ್ಲಿ ಕಲಿತು ಬಂದು ಗಾಂಧಿನಗರದಲ್ಲಿ ನೆಲೆ ಕಂಡುಕೊಳ್ಳಲು ಪ್ರಯತ್ನಿಸುತ್ತಿರುವ ನಿಶಾಂತ್, 'ಮಾಗಿಯ ಕಾಲ' ಚಿತ್ರದ ಪ್ರಬುದ್ಧ ಪಾತ್ರದಲ್ಲಿ ಗಮನ ಸೆಳೆದಿದ್ದರು. ಆದರೆ, ಕಮರ್ಷಿಯಲ್ ಸೂತ್ರಗಳಿಲ್ಲದ ಸಿನಿಮಾ ಜನರ ಗಮನ ಸೆಳೆಯಲಿಲ್ಲ; ನಿಶಾಂತ್‌ಗೆ ಹೊಸ ಅವಕಾಶಗಳೂ ಸಿಗಲಿಲ್ಲ. ಈಗ 'ಗೊರುಕನ' ಚಿತ್ರದ ಮೂಲಕ ಅವರು ಮತ್ತೆ ಕಾಣಿಸಿಕೊಳ್ಳುತ್ತಿದ್ದಾರೆ. 'ಮಾಗಿಯ ಕಾಲ' ಚಿತ್ರವನ್ನು ನಿರ್ಮಿಸಿದ್ದ ಭಾಗ್ಯ ಚಿನ್ನಸ್ವಾಮಿ ಅವರೇ 'ಗೊರುಕನ' ಚಿತ್ರವನ್ನೂ ನಿರ್ಮಿಸಿದ್ದಾರೆ.

ಕಾಡಿನೊಂದಿಗೆ ಬದುಕನ್ನು ಬೆಸೆದುಕೊಂಡ ಆದಿವಾಸಿಗಳು, ಬುಡಕಟ್ಟು ಸಮುದಾಯ, ಅಲ್ಲಿಂದ ಒಕ್ಕಲೇಳುವ ಸಮಯ ಬಂದಾಗ ಎದುರಿಸುವ ತಲ್ಲಣಗಳ ಕಥನ 'ಗೊರುಕನ' ಚಿತ್ರದ್ದು. ಆನಂದ್ ಪಿ. ರಾಜು ಈ ಚಿತ್ರದ ನಿರ್ದೇಶಕರು. ಕಮರ್ಷಿಯಲ್ ಚಿತ್ರಗಳಲ್ಲಿ ಗುರ್ತಿಸಿಕೊಂಡಿರುವ ಅವರು, 'ಗೊರುಕನ' ಮೂಲಕ ಕಟು ವಾಸ್ತವವೊಂದಕ್ಕೆ ಮುಖಾಮುಖಿಯಾಗಿದ್ದಾರೆ. ಕಮರ್ಷಿಯಲ್ ಅಂಶಗಳನ್ನು ಉಳಿಸಿಕೊಂಡೂ ಕಲಾತ್ಮಕ ಸಿನಿಮಾವೊಂದನ್ನು ರೂಪಿಸಲು ಪ್ರಯತ್ನಿಸಿರುವೆ ಎನ್ನುವ ಅನಿಸಿಕೆ ಅವರದು.



'ಮಾಗಿಯ ಕಾಲ'ದಷ್ಟೇ ಭಿನ್ನವಾದ ಸಿನಿಮಾದಲ್ಲಿ ನಟಿಸಿರುವ ಖುಷಿ ನಿಶಾಂತ್ ಅವರದು. ಈ ಸಿನಿಮಾದ ಮೂಲಕ ಪ್ರೇಕ್ಷಕರು ತನ್ನನ್ನು ಗುರ್ತಿಸಲಿದ್ದಾರೆ ಎನ್ನುವ ನಿರೀಕ್ಷೆಯೂ ಅವರಿಗಿದೆ. ನಿಶಾಂತ್ ಅವರಿಗೆ ಜೋಡಿಯಾಗಿ ನಟಿಸಿರುವ ಸೌಜನ್ಯ, ಮೇಕಪ್ ಹಂಗಿಲ್ಲದೆ ಸಿನಿಮಾದಲ್ಲಿ ನಟಿಸಿದ್ದಾರೆ. ಬಬ್ಲಿ ಪಾತ್ರಗಳ ಅಬ್ಬರದ ಚಿತ್ರರಂಗದಲ್ಲಿ ವಿಶಿಷ್ಟವಾದ ಪಾತ್ರವೊಂದರಲ್ಲಿ ನಟಿಸಿದ ಖುಷಿ ಅವರದು.

ವಿ. ಮನೋಹರ್ 'ಗೊರುಕನ' ಚಿತ್ರದ ಸಂಗೀತ ನಿರ್ದೇಶಕರು. ಸೋಲಿಗ ಸಮುದಾಯದೊಳಗೆ ಹಾಸುಹೊಕ್ಕಾದ ಸಂಗೀತವನ್ನು ಅವರು ಸಿನಿಮಾದಲ್ಲಿ ಕಾಣಿಸಲು, ಕೇಳಿಸಲು ಪ್ರಯತ್ನಿಸಿದ್ದಾರೆ. ಗೀತೆಗಳ ಮೂಲಕ, ಹಿನ್ನೆಲೆ ಸಂಗೀತದ ಮೂಲಕ ಪ್ರೇಕ್ಷಕರಿಗೆ ವನವಿಹಾರದ ಅನುಭವ ನೀಡುವ ಹಂಬಲದ ಅವರದು. ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ನಟಿಸಿರುವ ಹಿರಿಯ ನಟ ಶ್ರೀಧರ್ ಅವರ ಪ್ರಕಾರ, 'ಗೊರುಕನ' ಸಿನಿಮಾದಲ್ಲಿ ಕಾಡೇ ನಾಯಕ. ಅಂದಹಾಗೆ, 'ಗೊರುಕನ' ಸಿನಿಮಾ ತೆರೆಕಾಣಲು (ಜುಲೈ 11) ಸಿದ್ಧವಾಗಿದೆ. ಈಗಾಗಲೇ ಕೆಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಈ ಸಿನಿಮಾ ಪ್ರದರ್ಶನಗೊಂಡಿದೆ.



## ಮಳೆ ಹುಡುಗನೊಂದಿಗೆ ರಾಧಿಕಾ

'ಜೂಮ್' ಗಣೇಶ್ ಹೊಸ ಚಿತ್ರದ ಹೆಸರು. ಗಣೇಶ್ ಹುಟ್ಟುಹಬ್ಬದ ದಿನದಂದು 'ಜೂಮ್' ಚಿತ್ರದ ಹಾಡುಗಳ ಧ್ವನಿಮುದ್ರಣ ಆರಂಭವಾಗಿದೆ. 'ಪವರ್ ಸ್ಟಾರ್' ಚಿತ್ರಕ್ಕೆ ಸಂಗೀತ ನೀಡಿರುವ ಎಸ್.ಎಸ್. ತಮನ್ 'ಜೂಮ್'ಗೂ ಸಂಗೀತ ನೀಡುತ್ತಿದ್ದಾರೆ. ಈ ಚಿತ್ರದ ಶೂಟಿಂಗ್ ಸದ್ಯದಲ್ಲೇ ಆರಂಭವಾಗಿದೆ ಎನ್ನುತ್ತಾರೆ ನಿರ್ದೇಶಕ ಪ್ರಶಾಂತ್ ರಾಜ್. ಇದಿಷ್ಟು ಹೇಳಿದರೆ ಈ ಚಿತ್ರದ ವಿಶೇಷ ಹೇಳಿದಂತಾಗುವುದಿಲ್ಲ. ಸಿನಿಮಾದ ಮುಖ್ಯವಾದ ವಿಶೇಷ, 'ಜೂಮ್'ನ ನಾಯಕಿ ರಾಧಿಕಾ ಪಂಡಿತ್ ಎನ್ನುವುದರಲ್ಲಿ. ರಾಧಿಕಾ ಪಂಡಿತ್ ಎಲ್ಲಿ ಹೋದರು? ಅವರ ಹೊಸ ಸಿನಿಮಾ ಯಾವುದು? ಎಂದು ಕನ್ನಡ ಚಿತ್ರೋದ್ಯಮದ ಪತ್ತೇದಾರರು ಹುಡುಕಾಟ ನಡೆಸುತ್ತಿರುವಾಗಲೇ, 'ಜೂಮ್'ನಲ್ಲಿ ರಾಧಿಕಾ ಕಾಣಿಸಿಕೊಂಡಿದ್ದಾರೆ. ಪ್ರಶಾಂತ್ ಹೇಳಿದ ಕಥೆ ಅವರಿಗೆ ಇಷ್ಟವಾಗಿದೆ. ಅಂದಹಾಗೆ, ಗಣೇಶ್ ಜೊತೆ ಅವರು ನಟಿಸುತ್ತಿರುವುದು ಇದೇ ಮೊದಲು.

ಗಣೇಶ್ ಹಾಗೂ ರಾಧಿಕಾ ಇಬ್ಬರೂ ಗಾಂಧಿನಗರಕ್ಕೆ ಕನ್ನಡದ ಕಿರುತೆರೆಯ ಕೊಡುಗೆಗಳು. ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಈ ಕಲಾವಿದರು, ಸಾಕಷ್ಟು ಏರಿಳಿತಗಳನ್ನೂ ಕಂಡವರು. ಮುಂಗಾರು ಮಳೆ ಮೂಲಕ ಗಣೇಶ್, ಮೊಗ್ಗಿನ ಮನಸು ಮೂಲಕ ರಾಧಿಕಾ ಸಹೃದಯರ ಗಮನಸೆಳೆದರು. ಈಗ 'ಜೂಮ್' ಮೂಲಕ ಒಟ್ಟಾಗಿರುವ ಈ ಜೋಡಿಯ ಬಗ್ಗೆ ಗಾಂಧಿನಗರದಲ್ಲಿ ನಿರೀಕ್ಷೆಗಳು ಸಹಜವಾಗಿಯೇ ಹೆಚ್ಚಿವೆ.

■ ರಘು